# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 465
ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಕುಮಾರ್.ಕೆ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 11/12/2025
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಡಿಜಿಟಲ್ ಮೀಡಿಯಾ ಪಾಲಿಸಿ ಜಾರಿಗೆ ಬಂದಿದೆಯೇ: ಬಂದಿದ್ದಲ್ಲಿ. ಯಾವಾಗಿನಿಂದ ಜಾರಿಯಲ್ಲಿದೆ: | ಸರ್ಕಾರದ ನೀತಿ ಮತ್ತು ಯೋಜನೆಗಳನ್ನು ಅಂತರ್ಜಾಲ ಬಳಸುವ ಜನರಿಗೆ ತಲುಪುವುದಕ್ಕಾಗಿ ಡಿಜಿಟಲ್ ಜಾಹೀರಾತು ವ್ಯವಸ್ಥೆಯನ್ನು ಬಳಸಿಕೊಳ್ಳಲು "ಕರ್ನಾಟಕ ಡಿಜಿಟಲ್ ಜಾಹೀರಾತು ಮಾರ್ಗಸೂಚಿ 2024"ನ್ನು ಸರ್ಕಾರದ ಆದೇಶ ಸಂಖ್ಯೆ: ಕೆಸಿಐ-ವಿಪಿಜೆ/25/2024, ದಿನಾಂಕ:22-08-2024ರನ್ವಯ ಜಾರಿಗೆ ತರಲಾಗಿದೆ. |
| ಆ | ವಾರ್ತಾ ಇಲಾಖೆಯ ಜಾಹಿರಾತು ವಿತರಣೆಯಲ್ಲಿ ವರ್ಷಗಳ ಅನುಭವ, ನಂಬಿಕಸ್ಥ ಸುದ್ದಿ ಪ್ರಸಾರ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಪರಿಗಣಿಸಲು ವ್ಯವಸ್ಥೆ ಇಲ್ಲದಿರುವುದರಿಂದ ಇದನ್ನು ಪರಿಹರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ: | ಕರ್ನಾಟಕ ಡಿಜಿಟಲ್ ಜಾಹೀರಾತು ಮಾರ್ಗ ಸೂಚಿಗಳನ್ವಯ ಜಾಹೀರಾತು ದರ ನಿಗದಿಪಡಿಸಿ ಜಾಹೀರಾತು ಬಿಡುಗಡೆ ಮಾಡಲಾಗುವುದು.<br>ಸುದ್ದಿ ಪ್ರಸಾರ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಪರಿಗಣಿಸುವ ವ್ಯವಸ್ಥೆ ಇರುವುದಿಲ್ಲ. ಸಾಮಾಜಿಕ ಜಾಲತಾಣಗಳ ನಿರ್ವಹಣೆ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ಸರ್ಕಾರದಿಂದ ಯಾವುದೇ ಕ್ರಮ ಕೈಗೊಳ್ಳಲು ಅವಕಾಶವಿರುವುದಿಲ್ಲ. |
| ಇ | ದೀರ್ಘಕಾಲದ ಡಿಜಿಟಲ್ ಮಾಧ್ಯಮಗಳಿಗೆ "Preferred Digital Media Partner" ಅಥವಾ "Legacy Digital Media" ಸ್ಥಾನಮಾನ ನೀಡುವ ಬಗ್ಗೆ ಸರ್ಕಾರ ಯೋಚಿಸುತ್ತಿದೆಯೇ: | ಸರ್ಕಾರದ ಮುಂದೆ ಯಾವುದೇ ಪ್ರಸ್ತಾಪ ಇರುವುದಿಲ್ಲ. |
| ಈ | ಪ್ರಸ್ತುತ ಜಾಹೀರಾತು ದರ ನಿಗದಿಯಲ್ಲಿ ಹಳೆಯ ಪೋರ್ಟಲ್‌ಗಳ ಹಿರಿತನ ಹಾಗೂ ಓದುಗರ ಆಧಾರವನ್ನು ಮೌಲ್ಯಮಾಪನ ಮಾಡುವ ಪ್ರತ್ಯೇಕ ಸಮಿತಿ ರಚಿಸುವ ಕುರಿತು ಸರ್ಕಾರದ ನಿಲುವೇನು: | ಪ್ರತ್ಯೇಕ ಸಮಿತಿ ರಚಿಸುವ ಉದ್ದೇಶ ಸರ್ಕಾರದ ಮುಂದೆ ಇರುವುದಿಲ್ಲ. |
| ಉ | ಗ್ರಾಮೀಣ/ನಗರ ಭಾಗಗಳಲ್ಲಿ ಕನ್ನಡ ಸುದ್ದಿಯನ್ನು ವಿಸ್ತರಿಸುವ ದೊಡ್ಡ ಪಾತ್ರವಹಿಸಿದ ಸ್ಥಳೀಯ/ಪ್ರಾದೇಶಿಕ ಡಿಜಿಟಲ್ ಮೀಡಿಯಾಗಳಿಗೆ ಸಬ್ಸಿಡಿ, ತಾಂತ್ರಿಕ ಬೆಂಬಲ ಅಥವಾ ತ್ರೈಮಾಸಿಕ ಜಾಹಿರಾತು ಕೋಟಾ ನೀಡುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾಪವಿದೆಯೇ? | ಸರ್ಕಾರದ ಮುಂದೆ ಯಾವುದೇ ಪ್ರಸ್ತಾಪ ಇರುವುದಿಲ್ಲ. |

ಸಂ:ಕೆಸಿಐ-ಪಿಐಪಿ/287/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ